## ಕವಿತೆ




# ಡಾ. ಎಚ್.ಎಸ್. ಅನುಪಮಾ

ಕಲೆ: ವಿಶ್ವನಾಥ ಎ.ಎಸ್.




## ಕೇದಿಗೆಯ ಬನ

ಕೇದಿಗೆಯ ಬನ
ಒಳಗೆ ಸೆಳೆಯುವ ಘಮ

ಒಳಹೊಕ್ಕು ಚಣ ಹೊತ್ತು ಕರಗಿ
ಕತ್ತು ಕೊಂಕಿದರೊಂದು ಸನ್ನೆ
ಒಡೆದ ದನಿಯಲೊಂದು ಹೆಮ್ಮೆ
ಬೆನ್ನ ಮೇಲೆ ನೆಟ್ಟ ಕಣ್ಣ ಬಾಣ
ಉಸಿರುಗಟ್ಟಿಸುವ ಬೆಚ್ಚನ್ನ ಮೋಹಯಾನ

ಬಯಲಂತೆ ಕಾಣುವ ಆಲಯದೊಳಗೆ
ಹುಣ್ಣಿಮೆ ಇರುಳ ಹ್ಲಾಂತೆಗಳಂತೆ
ಘಾತಿಸುತ್ತವೆ ಕಾಮ ಪ್ರೇಮ ಮೋಹದಭಾವಗಳು
ಕಲಿತ ನುಡಿಯ ಯಾವ ಪದವೂ
ಕಿಂಡಿಯಲಿ ನುಸುಳಿ ಹೊರ ಬಾರದು

ಕಾಲಿಟ್ಟರೆ ಉಚಿತ ತರಚು ಗಾಯ
ಇದ್ದೇ ಇದೆ ಭುಸುಗುಡುವ ಹಾವಿನ ಭಯ
ಕೊಯ್ದು, ಸೋಸಿ, ಮುಡಿದರೆ
ಶಿವನನೇ ಹೆರಳಲಿಟ್ಟ ಹೆಮ್ಮೆ
ಒಣಗಿ ಬಿಸುಟರೂ ಕೇದಿಗೆಯ ಸುವಾಸನೆ!

ಸೂಡಲಾರೆ ಬಿಸುಡಲಾರೆ
ತಡೆಯಲಾರೆ ಇಟ್ಟುಕೊಳ್ಳಲಾರೆ
ಸಂಸಾರವೆಂಬ ಕೇದಿಗೆಯ ಬನ
ಅಮಲು, ಅಂಟು, ಪರಿಮಳ, ಪಂಜರ
ಗಳ ಅಯಾಚಿತ ದರುಶನ